**ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಕೊಳ್ಳೇಗಾಲ.**

**ಸಿ.ಸಿ. 115/2025**

**ಪಿರ್ಯಾದುದಾರರು** **ವಿರುದ್ಧ** **ಆರೋಪಿತರುಃ**

ಹನೂರು ಪೊಲೀಸ್ ಠಾಣೆ ದೇವಮಣಿ @ಶ್ವೇತಾ ಮತ್ತು ಇತರರು

**:: ದೋಷಾರೋಪಣೆ ::**

**ಶ್ರೀ. ಎಂ. ರಂಜಿತ್ ಕುಮಾರ್, ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು, ಕೊಳ್ಳೇಗಾಲ, ಆದ ನಾನು ನಿಮ್ಮ ಮೇಲೆ ಅಂದರೆಃ**

1. ಶ್ರೀಮತಿ. ದೇವಮಣಿ @ಶ್ವೇತಾ ಕೊಂ ಲೇಟ್ ನಾಗರಾಜು, 33 ವರ್ಷ,
   **ವಾಸಃ** ಬಂಡಳ್ಳಿ ಗ್ರಾಮ,
   ಹನೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ.
2. ಶ್ರೀ. ರೇವಣ್ಣಸ್ವಾಮಿ @ರೇವಣ್ಣ ಬಿನ್ ಲೇ. ಶಿವಮಲ್ಲಪ್ಪ, 60 ವರ್ಷ,
3. ಶ್ರೀಮತಿ. ವಿಶಾಲಾಕ್ಷಿ ಕೊಂ ರೇವಣ್ಣಸ್ವಾಮಿ @ರೇವಣ್ಣ , 58 ವರ್ಷ,
   **ಇಬ್ಬರ ವಾಸಃ** ಕಲ್ಪುರ ಗ್ರಾಮ,
   ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ.

**ಈ ಕೆಳಗಿನಂತೆ ದೋಷಾರೋಪಣೆ ಹೊರೆಸಿದ್ದೇನೆಃ**

ದಿನಾಂಕ: 07-12-2024 ರಂದು ಬೆಳಿಗ್ಗೆ ಸುಮಾರು 08-45 ಗಂಟೆಯ ಸಮಯದಲ್ಲಿ ಹನೂರು ತಾಲ್ಲೂಕು, ಹನೂರು ಠಾಣಾ ಸರಹದ್ದಿಗೆ ಸೇರಿದ ಬಂಡಳ್ಳಿ ಗ್ರಾಮದ ಸಾಕ್ಷಿ-1 ರವರು ತಮ್ಮ ಬಾಬ್ತು ಬಂಡಳ್ಳಿ ಗ್ರಾಮದ ಸರ್ವೇನಂ. 1304/2 ಜಮೀನಿನಲ್ಲಿರುವ ತೋಟದ ಮನೆಯ ಮುಂದೆ ಅಡುಗೆ ಮಾಡುತ್ತಿದ್ದಾಗ ಆರೋಪಿಗಳಾದ ನೀವು ಗಲಾಟೆ ಮಾಡುವ ಉದ್ದೇಶದಿಂದ ಸಾಕ್ಷಿ-1 ರವರ ಜಮೀನಿನಲ್ಲಿರುವ ತೋಟದ ಮನೆಯ ಬಳಿ ಇರುವ ಆರೋಪಿ-1 ರವರಿಗೆ ಸೇರಿದ ತಮ್ಮ ಜಮೀನಿನಲ್ಲಿ ನಿಂತುಕೊಂಡು ಆ ಪೈಕಿ ಆರೋಪಿ-1 ರವರು ಸಾಕ್ಷಿ-1 ರವರ ಮೇಲೆ ಏಕಾಏಕಿ ಗಲಾಟೆ ಮಾಡಿ ಲೋಫರ್ಮುಂಡೆ ಎಂದು ಅವ್ಯಾಚ ಶಬ್ದಗಳಿಂದ ಬೈದು ಸಾರ್ವಜನಿಕವಾಗಿ ಅವಮಾನ ಉಂಟಾಗುವಂತೆ ಮಾಡಿದ್ದು, ಆ ಮೂಲಕ ಭಾ.ನ್ಯಾ.ಸಂ.ಕಲಂ 352 ಸಹವಾಚಕ ಕಲಂ 3(5) ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದೊಳಗೆ ಎಸಗಿರುತ್ತೀರಿ ಎಂಬುದಾಗಿದೆ.

ಎರಡನೇಯದಾಗಿ ಮೇಲೆ ಹೇಳಿದ ಸ್ಥಳ, ಸಮಯ ಹಾಗೂ ದಿನಾಂಕದಂದು ಆರೋಪಿಗಳಾದ ನೀವುಗಳು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಬಂದು ಸಾಕ್ಷಿ-1 ರವರು ಆರೋಪಿ-1 ರವರನ್ನು ಯಾರನ್ನು ನೀನು ಬೈಯುವುದು ಎಂದು ಕೇಳಿದಾಗ ಆರೋಪಿ-1 ರವರು ನಿನ್ನನ್ನೆ ಬೈಯ್ಯುವುದು ಎಂದು ಉದ್ದೇಶಪೂರ್ವಕವಾಗಿ ಎಡಕಪಾಲಕ್ಕೆ ಹೊಡೆದು, ಎಡಕೈಗೆ ಉಗುರಿನಿಂದ ಪರಚಿದ್ದು, ಆರೋಪಿ-2 ರವರು ಸಾಕ್ಷಿ-1 ರವರ ಜುಟ್ಟು ಹಿಡಿದು ಎಳೆದಾಡಿ, ಬೆನ್ನಿಗೆ ಹೊಡೆದು ಕೆಳಕ್ಕೆ ಬೀಳಿಸಿ ಆರೋಪಿ-1 ಮತ್ತು 2 ರವರು ಕಾಲುಗಳಿಂದ ತುಳಿದು ಸಾಮಾನ್ಯ ಸ್ವರೂಪ ನೋವುಂಟು ಮಾಡಿದ್ದು, ಆ ಮೂಲಕ ಭಾ.ನ್ಯಾ.ಸಂ.ಕಲಂ 115(2) ಸಹವಾಚಕ ಕಲಂ 3(5) ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದೊಳಗೆ ಎಸಗಿರುತ್ತೀರಿ ಎಂಬುದಾಗಿದೆ.

ಮೂರನೇಯದಾಗಿ ಮೇಲೆ ಹೇಳಿದ ಸ್ಥಳ, ಸಮಯ ಹಾಗೂ ದಿನಾಂಕದಂದು ಆರೋಪಿಗಳಾದ ನೀವುಗಳು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಬಂದು ನಿಮ್ಮ ಪೈಕಿ 2ನೇ ಆರೋಪಿ ರವರು ಉದ್ದೇಶಪೂರ್ವಕವಾಗಿ ಸಾಕ್ಷಿ-1 ರವರ ಜುಟ್ಟು ಹಿಡಿದು ಎಳೆದಾಡಿ ಸಾರ್ವಜನಿಕವಾಗಿ ಅವಮಾನವನ್ನುಂಟು ಮಾಡಿದ್ದು, ಆ ಮೂಲಕ ಭಾ.ನ್ಯಾ.ಸಂ.ಕಲಂ 74 ಸಹವಾಚಕ ಕಲಂ 3(5) ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದೊಳಗೆ ಎಸಗಿರುತ್ತೀರಿ ಎಂಬುದಾಗಿದೆ.

ಕೊನೇಯದಾಗಿ ಮೇಲೆ ಹೇಳಿದ ಸ್ಥಳ, ಸಮಯ ಹಾಗೂ ದಿನಾಂಕದಂದು ಆರೋಪಿಗಳಾದ ನೀವುಗಳು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಬಂದು ನಿಮ್ಮ ಪೈಕಿ 3ನೇ ಆರೋಪಿ ರವರು ಉದ್ದೇಶಪೂರ್ವಕವಾಗಿ ಆರೋಪಿ-1 ಮತ್ತು ಆರೋಪಿ-2 ರವರಿಗೆ ಅವಳನ್ನು ಬಿಡಬೇಡಿ ಕೊಲೆ ಮಾಡಿ ಎಂದು ಕುಮ್ಮಕ್ಕು ನೀಡಿರುವುದು ಕಂಡು ಬಂದಿದ್ದು, ಆ ಮೂಲಕ ಭಾ.ನ್ಯಾ.ಸಂ.ಕಲಂ 54 ಸಹವಾಚಕ ಕಲಂ 3(5) ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದೊಳಗೆ ಎಸಗಿರುತ್ತೀರಿ ಎಂಬುದಾಗಿದೆ.

ಮೇಲಿನ ಆರೋಪಗಳಿಗೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗುವಂತೆ ನಿಮಗೆ ನಿರ್ದೇಶಿಸಲಾಗಿದೆ.

04 ನೇ ಮೇ ಮಾಹೆ 2026.

**( ಎಂ. ರಂಜಿತ್ ಕುಮಾರ್ )**
ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಕೊಳ್ಳೇಗಾಲ.

**ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಕೊಳ್ಳೇಗಾಲ.**

**ಸಿ.ಸಿ.ನಂ. 115/2025**

| **ಫಿರ್ಯಾದುದಾರರು** | **ವಿರುದ್ಧ** | **ಆರೋಪಿ-1** |
|---|---|---|
| ಹನೂರು ಪೊಲೀಸ್ ಠಾಣೆ | | ಶ್ರೀಮತಿ. ದೇವಮಣಿ @ಶ್ವೇತಾ |

**:: ಆರೋಪಿ ಹೇಳಿಕೆ ::**

**ಪ್ರಶ್ನೆ :1: ನಿಮಗೆ ಓದಿ ಹೇಳಿದ ಆಪಾದನೆ ತಿಳಿಯಿತೆ?**

**ಉತ್ತರ :**

**ಪ್ರಶ್ನೆ :2: ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ನಿಮ್ಮ ಪ್ರತಿವಾದ ಇದೆಯೇ?**

**ಉತ್ತರ :**

**(ಮೇಲಿನ ಆಪಾದನೆಯನ್ನು ಆರೋಪಿಗೆ ಓದಿ, ಹೇಳಿದ ನಂತರ ಆರೋಪಿ ಅದನ್ನು ಅರ್ಥ ಮಾಡಿಕೊಂಡ ನಂತರ ನೀಡಿದ ಉತ್ತರಗಳನ್ನು ದಾಖಲು ಮಾಡಿದ್ದೇನೆ. ಸದರಿ ದಾಖಲೆಯು ಸರಿಯಾದುದು ಮತ್ತು ನಿಜವಾದುದು ಎಂದು ದೃಢೀಕರಿಸುತ್ತೇನೆ)**

**ದಿನಾಂಕ: 04.05.2026**

**ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದ., ಕೊಳ್ಳೇಗಾಲ.**

**ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಕೊಳ್ಳೇಗಾಲ.**

**ಸಿ.ಸಿ.ನಂ. 115/2025**

| **ಫಿರ್ಯಾದುದಾರರು** | **ವಿರುದ್ಧ** | **ಆರೋಪಿ-2** |
|---|---|---|
| ಹನೂರು ಪೊಲೀಸ್ ಠಾಣೆ | | ಶ್ರೀ. ರೇವಣ್ಣಸ್ವಾಮಿ @ರೇವಣ್ಣ |

**:: ಆರೋಪಿ ಹೇಳಿಕೆ ::**

**ಪ್ರಶ್ನೆ :1: ನಿಮಗೆ ಓದಿ ಹೇಳಿದ ಆಪಾದನೆ ತಿಳಿಯಿತೆ?**

**ಉತ್ತರ :**

**ಪ್ರಶ್ನೆ :2: ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ನಿಮ್ಮ ಪ್ರತಿವಾದ ಇದೆಯೇ?**

**ಉತ್ತರ :**

**(ಮೇಲಿನ ಆಪಾದನೆಯನ್ನು ಆರೋಪಿಗೆ ಓದಿ, ಹೇಳಿದ ನಂತರ ಆರೋಪಿ ಅದನ್ನು ಅರ್ಥ ಮಾಡಿಕೊಂಡ ನಂತರ ನೀಡಿದ ಉತ್ತರಗಳನ್ನು ದಾಖಲು ಮಾಡಿದ್ದೇನೆ. ಸದರಿ ದಾಖಲೆಯು ಸರಿಯಾದುದು ಮತ್ತು ನಿಜವಾದುದು ಎಂದು ದೃಢೀಕರಿಸುತ್ತೇನೆ)**

**ದಿನಾಂಕ: 04.05.2026**

**ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದ., ಕೊಳ್ಳೇಗಾಲ.**

**ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಕೊಳ್ಳೇಗಾಲ.**

**ಸಿ.ಸಿ.ನಂ. 115/2025**

| | | |
|---|---|---|
| **ಫಿರ್ಯಾದುದಾರರು** | **ವಿರುದ್ಧ** | **ಆರೋಪಿ-3** |
| ಹನೂರು ಪೊಲೀಸ್ ಠಾಣೆ | | ಶ್ರೀಮತಿ. ವಿಶಾಲಾಕ್ಷಿ |

**:: ಆರೋಪಿ ಹೇಳಿಕೆ ::**

**ಪ್ರಶ್ನೆ :1: ನಿಮಗೆ ಓದಿ ಹೇಳಿದ ಆಪಾದನೆ ತಿಳಿಯಿತೆ?**

**ಉತ್ತರ :**

**ಪ್ರಶ್ನೆ :2: ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ನಿಮ್ಮ ಪ್ರತಿವಾದ ಇದೆಯೇ?**

**ಉತ್ತರ :**

**(ಮೇಲಿನ ಆಪಾದನೆಯನ್ನು ಆರೋಪಿಗೆ ಓದಿ, ಹೇಳಿದ ನಂತರ ಆರೋಪಿ ಅದನ್ನು ಅರ್ಥ ಮಾಡಿಕೊಂಡ ನಂತರ ನೀಡಿದ ಉತ್ತರಗಳನ್ನು ದಾಖಲು ಮಾಡಿದ್ದೇನೆ. ಸದರಿ ದಾಖಲೆಯು ಸರಿಯಾದುದು ಮತ್ತು ನಿಜವಾದುದು ಎಂದು ದೃಢೀಕರಿಸುತ್ತೇನೆ)**

**ದಿನಾಂಕ: 04.05.2026**

**ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ., ಕೊಳ್ಳೇಗಾಲ.**